ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ರಾಜ್ಯದ ಎಲ್ಲಾ ಬಾಬ್ತುಗಳಿಂದ ಬಂದಿರುವ ಒಟ್ಟು ಆದಾಯ :

		ಕೋಟಿ ರೂ.ಗಳಲ್ಲಿ
೧೯೮೩-೮೪ (ಲೆಕ್ಕ)	...	೧,೭೬೨.೭೭
೧೯೮೪-೮೫ (ಲೆಕ್ಕ)	...	೨,೧೮೮.೬೨
೧೯೮೫-೮೬ (ಪರಿಷ್ಕೃತ ಅಂದಾಜು)	...	೨,೯೬೯.೪೯

ಆ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿ ಸಾಲಿಯಾನ ಖರ್ಚು ಮಾಡಿರುವ ಹಣದ ಮೊತ್ತ :

		ಕೋಟಿ ರೂ.ಗಳಲ್ಲಿ
೧೯೮೩-೮೪ (ಲೆಕ್ಕ)	...	೪೩೭.೦೩
೧೯೮೪-೮೫ (ಲೆಕ್ಕ)	...	೫೦೨.೧೫
೧೯೮೫-೮೬ (ಪರಿಷ್ಕೃತ ಅಂದಾಜು)	...	೬೨೮.೦೬

ಹುಬ್ಬಳ್ಳಿಯಲ್ಲಿನ ಕೆ.ಎಂ.ಸಿ. ಆಸ್ಪತ್ರೆ ಜನರೇಟರ್ ಬಗ್ಗೆ

೪೩೩. ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಆಗಾಗ್ಗೆ ವಿದ್ಯುತ್ ಸರಬರಾಜಿನಲ್ಲಿ ಕಡಿತವಿರುವುದರಿಂದ ಸದರಿ ತೊಂದರೆಯನ್ನು ನೀಗಲು ಅಲ್ಲಿ ಒಂದು ಜನರೇಟರನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು).—

ಅ) ಈಗಾಗಲೇ ಮೂರು ಜನರೇಟರುಗಳನ್ನು ಒದಗಿಸಲಾಗಿದೆ.

ವೈದ್ಯಕೀಯ ಮತ್ತು ತಾಂತ್ರಿಕ ಸೀಟುಗಳ ಬಗ್ಗೆ

೪೮೦. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ಸಾಲಿನಲ್ಲಿ ಸರ್ಕಾರದವರಿಗೆ ಎಷ್ಟು ಸರ್ಕಾರಿ ವೈದ್ಯಕೀಯ ಸ್ಥಾನಗಳು ದೊರೆಯುತ್ತವೆ ?

ಆ) ಇದನ್ನು ಹಂಚುವಾಗ ಹಾವನೂರ ವರದಿ ಆಧಾರದ ಮೇಲಿನ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗುವುದೇ ?

ಇ) ಕಳೆದ ಸಾಲಿನಲ್ಲಿ ಯಾವ ಯಾವ ಗ್ರೂಪ್‌ನಲ್ಲಿ (ಜಾತಿ) ಎಷ್ಟು ಎಷ್ಟು ಅಂಕಗಳಿಗೆ ಸ್ಥಾನ ದೊರಕಿದೆ ? (ವಿವರಗಳೊಡನೆ)

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಖಾಸಗಿ ಕಾಲೇಜುಗಳಲ್ಲಿ ಆಯಾ ವ್ಯಾಸಂಗ ವರ್ಷಕ್ಕೆ ಲಭ್ಯವಾಗುವ ಸೀಟುಗಳನ್ನು ಗಮನಿಸಿ ಸರ್ಕಾರದ ಸೀಟುಗಳನ್ನು ಗೊತ್ತುಪಡಿಸಬೇಕಾಗಿರುವುದರಿಂದ ೧೯೮೭-೮೮ನೇ ಸಾಲಿಗೆ ಲಭ್ಯವಿರುವ ಸರ್ಕಾರಿ ಸೀಟುಗಳನ್ನು ಈ ಹಂತದಲ್ಲಿ ತಿಳಿಸುವುದು ಸಾಧ್ಯವಾಗುವುದಿಲ್ಲ.

ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳು ಸೇರಿ ಪ್ರಸ್ತುತ ೧೯೮೬-೮೭ನೇ ಸಾಲಿಗೆ ಸರ್ಕಾರಕ್ಕೆ ೯೨೨ ಸೀಟುಗಳಿವೆ.

ಆ) ಹೌದು.

ಇ) ಪರಿಶಿಷ್ಟ ಜಾತಿ ಆಯ್ಕೆಯಾದ ಕೊನೆ

ಅಭ್ಯರ್ಥಿ ಗಳಿಸಿದ ರ್‍ಯಾಂಕ್ ಸಂಖ್ಯೆ	...	೬೯೧೯
ಪರಿಶಿಷ್ಟ ಬುಡಕಟ್ಟು	...	೭೯೧೪
ಹಿಂದುಳಿದ ಬುಡಕಟ್ಟು	...	೭೯೬೭
ಹಿಂದುಳಿದ ಜಾತಿ	...	೭೭೨೯
ಹಿಂದುಳಿದ ಕೋಮು	...	೩೩೮೨
ಆರ್ಥಿಕವಾಗಿ ಹಿಂದುಳಿದ ವಿಶೇಷ ಗುಂಪು	...	೨೫೦೯
ಸಾಮಾನ್ಯ ಅರ್ಹತೆ	...	೪೮೬

ರೋಣ ನಗರಕ್ಕೆ ೩೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವ ಬಗ್ಗೆ

೩೦೩. *ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ನಗರದಲ್ಲಿ ೩೦ ಹಾಸಿಗೆಗಳುಳ್ಳ ಆಸ್ಪತ್ರೆಯು ಮಂಜೂರಾತಿಗಾಗಿ ಸರ್ಕಾರಕ್ಕೆ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಯು ಮಂಜೂರಾತಿಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು).—

ಅ) ಬಂದಿದೆ.

ಆ) ಭಾರತ ಜನಸಂಖ್ಯಾ ಯೋಜನೆ-೩ರಡಿಯಲ್ಲಿ ರೋಣದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿ ಈಗಾಗಲೇ ಸರ್ಕಾರಿ ಆಜ್ಞೆ ಹೊರಡಿಸಲಾಗಿದೆ. ಕಟ್ಟಡದ ನಿರ್ಮಾಣ ಕಾರ್ಯವನ್ನು ಸಹ ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ.

ರಾಜ್ಯದಲ್ಲಿ ಮದ್ಯಪಾನ (ಹೆಂಡ) ಮಾರಾಟದ ಬಗ್ಗೆ

೩೫೪. ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಆರೋಗ್ಯ ಮಂತ್ರಿ ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈಗ ಮಾರಾಟ್ತಿರುವ ಮದ್ಯಪಾನ (ಹೆಂಡ)ದಲ್ಲಿ ಕೃತಕ ರಾಸಾಯನಿಕ ವಸ್ತು ಗಳನ್ನು ಬೆರಕೆ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಆ) ಸಾರಾಯಿ ಶೀಶೆಗಳನ್ನು ಸರ್ಕಾರದವರು ಸೀಲ್ ಮಾಡಿ ಮಾರಾಟ ಮಾಡಿಸುತ್ತಿದ್ದರು, ಈ ಶೀಶೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಚಿಲ್ಲರೆಯಾಗಿ ಕಲಬೆರಕೆ ಮಾಡಿ ಮಾರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದ್ದಾರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಆಬಕಾರಿ ಸಚಿವರು).—

ಅ) ಕಲಬೆರಕೆ ಶೇಂದಿ ಮಾರಾಟದ ಬಗ್ಗೆ ಯಾವುದೇ ವರದಿಯು ಇದುವರೆವಿಗೂ ಬಂದಿರುವುದಿಲ್ಲ. ಆ ರೀತಿ ಕಂಡು ಬಂದಲ್ಲಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಮೊಹರು ಮಾಡಿದ ಶೀಶೆಗಳಲ್ಲಿ ಕಲಬೆರಕೆ ಸಾರಾಯಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಚಿಲ್ಲರೆಯಾಗಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. ಸದ್ಯಕ್ಕೆ ಸಾರಾಯಿಯನ್ನು ಶೀಶೆಗಳಲ್ಲಿ ಮೊಹರು ಮಾಡದೆ ಚಿಲ್ಲರೆಯಾಗಿ ಮಾರಾಟ ಮಾಡಲಾಗುತ್ತಿದೆ.